KARN320003072021

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ**

**ಸಿಸಿ ಸಂಖ್ಯೆಃ 106/2021**

**ದಿನಾಂಕ: 29ನೇ ಜೂನ್ 2026**

ಉಪಸ್ಥಿತರುಃ ಶ್ರೀ ವಿನಯ್ ವಿಠಲ್ ಕುಂದಾಪುರ್, ಬಿ.ಎ.ಎಲ್, ಎಲ್.ಎಲ್.ಬಿ

2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು : ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ, ಕನಕಪುರ**

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತರು :** 1) ವೆಂಕಟೇಶ ಉಃ ತರ್ಲಿಂಗು

ಬಿನ್ ನಾಗೇಗೌಡ,

51 ವರ್ಷ ವಯಸ್ಸು,

2) ನಾಗರಾಜು

ಬಿನ್ ಲೇಟ್ ನಾಗೇಗೌಡ

61 ವರ್ಷ ವಯಸ್ಸು,

1 ಮತ್ತು 2 ನೇ ಆರೋಪಿತರ

ವಾಸಃ ತಿಗಳರಹಳ್ಳಿ ಗ್ರಾಮ,

ಕಸಬಾ ಹೋಬಳಿ,

ಕನಕಪುರ ತಾಲ್ಲೂಕು,

ರಾಮನಗರ ಜಿಲ್ಲೆ.

**(ಶ್ರೀ ವಿ. ಎನ್.ಡಿ., ವಕೀಲರವರಿಂದ)**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 29.11.2020 |
| 2 | ಘಟನೆ ವರದಿ ಮಾಡಿದ ದಿನಾಂಕ | : 30.11.2020 |
| 3 | ಪಿರ್ಯಾದುದಾರರ ಹೆಸರು | : ಶ್ರೀನಿವಾಸ ಮೂರ್ತಿ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 25.06.2026 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 25.06.2026 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 |

7 ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ :29.06.2026

8 ನ್ಯಾಯಾಧೀಶರ ಅಭಿಪ್ರಾಯ : ಆರೋಪಿತರನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ.

**::ತೀರ್ಪು::**

ಆರಕ್ಷಕ ಉಪ ನಿರೀಕ್ಷಕರು, ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ, ಕನಕಪುರ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕಃ 29.11.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಿಗಳರಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು ಚಾಸಾ-2 ರವರು ತಮ್ಮ ಜಮೀನಿನಲ್ಲಿ ಸೀಮೆ ಹುಲ್ಲನ್ನು ಕೊಯ್ಯುತ್ತಿದ್ದಾಗ, ಚಾಸಾ-1 ರವರ ಬಾಬ್ತು

ಜಮೀನಿನಲ್ಲಿದ್ದ ತೆಂಗಿನ ಮರದ ಗರಿಯು, 1 ಮತ್ತು 2 ನೇ ಆರೋಪಿತರುಗಳ ಜಮೀನಿಗೆ ಬಿದ್ದಿದ್ದು, 1 ನೇ ಆರೋಪಿಯು ತೆಂಗಿನ ಗರಿಯನ್ನು ಚಾಸಾ-1 ರವರ ಜಮೀನಿನ ಕಡೆಗೆ ಎಸೆದನು. ಆಗ ಚಾಸಾ-2 ರವರು ನಿಧಾನವಾಗಿ ಎಸೆಯಪ್ಪ ಚಿಕ್ಕಗಿಡಗಳ ಮೇಲೆ ಬಿದ್ದರೆ ಹಾಳಾಗುತ್ತದೆ ಎಂದು ಹೇಳಿದ್ದಕ್ಕೆ, 1 ನೇ ಆರೋಪಿಯು ಚಾಸಾ-2 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯವಾಗಿ ಬೈದು, ಇನ್ನೊಂದು ಸಾರಿ ನಿಮ್ಮ ಮರದ ಗರಿ, ನಮ್ಮ ಜಮೀನಿಗೆ ಬಿದ್ದರೆ, ನಿಮ್ಮನ್ನು ಸುಟ್ಟಾಕ್ತೀನಿ ಎಂದು ಚಾಸಾ-2 ರವರಿಗೆ ಪ್ರಾಣ ಬೆದರಿಕೆ ಹಾಕಿದನು. ಹಿಂದಿನ ದ್ವೇಷದಿಂದ 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಕುಡಗೋಲಿನಿಂದ ಚಾಸಾ-1 ರವರ ಬಲಗೈಗೆ ಹೊಡೆದು ರಕ್ತಗಾಯಪಡಿಸಿದ್ದು, ಆಗ ಚಾಸಾ-1 ರವರು ಕುಡಗೋಲನ್ನು ಹಿಡಿದುಕೊಂಡಾಗ, ಚಾಸಾ-1 ರವರ ಎಡಗೈ ಬೆರಳಿಗೆ ಕುಡುಗೋಲು ತಾಗಿ ರಕ್ತಗಾಯವಾಗಿರುತ್ತದೆ, ಚಾಸಾ-3 ರವರು ಜಗಳವನ್ನು ಬಿಡಿಸಲು ಬಂದಾಗ, 2 ನೇ ಆರೋಪಿಯು ಕೈಯಿಂದ ಚಾಸಾ-3 ರವರ ಮುಖದ ಮೇಲೆ, ಎದೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ. 1 ನೇ ಆರೋಪಿಯು ಇವರನ್ನೆಲ್ಲಾ ಕೊಲೆ ಮಾಡಿ, ಕೋರ್ಟ್ ನಲ್ಲಿ ಜಾಮೀನು ಪಡೆದುಕೊಳ್ಳುವುದಾಗಿ ಚಾಸಾ-1, ಚಾಸಾ-2 ಮತ್ತು ಚಾಸಾ-3 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರಿಗೆ

ಕುಡುಗೋಲಿನಿಂದ ಹೊಡೆದಿದ್ದರಿಂದ ಸಾಧಾರಣ ಸ್ವರೂಪದ ಏಟು ಬಿದ್ದಿರುತ್ತದೆ ಎಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 13 ಸಾಕ್ಷಿದಾರರಲ್ಲಿ, 3 ಸಾಕ್ಷಿದಾರರನ್ನು ಮಾತ್ರ ಪ್ರಾ.ಸಾ-1 ರಿಂದ ಪ್ರಾ.ಸಾ-3 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ. ವಿಚಾರಣೆ ಮಾಡಿ 4 ದಾಖಲೆಗಳನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-5 ಎಂದು ಗುರುತಿಸಿರುತ್ತಾರೆ.

**6.** ಅಭಿಯೋಜನೆಯ ಪಕ್ಷದ ಪ್ರಕರಣಕ್ಕೆ ಪೂರಕವಾಗಿ ಪ್ರಾ.ಸಾ-1 ರಿಂದ ಪ್ರಾಸಾ-3 ರವರು ಸಾಕ್ಷಿ ನುಡಿಯದೇ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವು ದೊರೆಯದಿದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ವಿನಾಯಿತಿ ನೀಡಲಾಯಿತು.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಈ ಕೆಳಕಂಡ ಅಂಶಗಳು ನನ್ನ ಗಮನಕ್ಕೆ ಬಂದಿರುತ್ತವೆ.

1. ದಿನಾಂಕಃ 29.11.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ತಿಗಳರಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು ಚಾಸಾ-2 ರವರ ಜಮೀನಿನಲ್ಲಿ ಸೀಮೆ ಹುಲ್ಲನ್ನು ಕುಯ್ಯುತ್ತಿದ್ದಾಗ ಚಾಸಾ-1 ರವರ ಜಮೀನಿನಲ್ಲಿ ಇದ್ದ ಗರಿಯು ಆರೋಪಿ 1 ಮತ್ತು 2 ರವರ ಜಮೀನಿನಲ್ಲಿ ಬಿದ್ದಿದ್ದು, ಆರೋಪಿ 1 ರವರು ತೆಂಗಿನ

ಗರಿಯನ್ನು ಚಾಸಾ-1 ರವರ ಜಮೀನಿಗೆ ಎಸೆದಾಗ, ಚಾಸಾ-2 ರವರು ತೆಂಗಿನ ಗರಿಯನ್ನು ನಿಧಾನವಾಗಿ ಎಸೆಯಪ್ಪ ಎಂದು ಹೇಳಿದಾಗ, ಚಾಸಾ-2 ರವರು ಕುಪಿತರಾಗಿ ಸಾರ್ವಜನಿಕ ಭಂಗ ಉಂಟು ಮಾಡುವ ಉದ್ದೇಶದಿಂದ ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

2. ಈ ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, ಸ್ವ ಇಚ್ಚೆಯಿಂದ 1 ನೇ ಆರೋಪಿಯು ಮಾರಾಕಾಯಧವಾದ ಕುಡುಗೋಲಿನಿಂದ ಚಾಸಾ-1 ರವರ ಬಲಗೈಗೆ ಹೊಡೆದು ರಕ್ತಗಾಯ ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

3. ಈ ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, ಚಾಸಾ-3 ರವರು ಜಗಳ ಬಿಡಿಸಲು ಬಂದಾಗ 2 ನೇ ಆರೋಪಿಯು ಕೈಯಿಂದ ಚಾಸಾ-3 ರವರ ಮುಖದ ಮೇಲೆ, ಎದೆಯ ಮೇಲೆ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

4. ಈ ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1 ನೇ ಆರೋಪಿಯು ಸ್ವ ಇಚ್ಛೆಯಿಂದ ಇನ್ನೊಂದು ಸಾರಿ ನಿಮ್ಮ ಮರದ ಗರಿ ನಮ್ಮ ಜಮೀನಿಗೆ ಬಿದ್ದರೆ ನಿಮ್ಮನ್ನು ಸುಟ್ಟಾಕುತ್ತೀನಿ ಎಂದು ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

5. ಯಾವ ಆದೇಶ ?

**9.** ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆಃ

**ಅಂಶ-1 :** **ನಕಾರಾತ್ಮಕವಾಗಿ**

**ಅಂಶ-2 :** **ನಕಾರಾತ್ಮಕವಾಗಿ**

**ಅಂಶ-3 :** **ನಕಾರಾತ್ಮಕವಾಗಿ**

**ಅಂಶ-4 :** **ನಕಾರಾತ್ಮಕವಾಗಿ**

**ಅಂಶ-5 :** **ಅಂತಿಮ ಆದೇಶ**

## ಕಾರಣಗಳು

**10. ಅಂಶ-1 ರಿಂದ 4 :-** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯಗಳ ಸಲುವಾಗಿ ಒಟ್ಟಿಗೆ ಚರ್ಚಿಸಲಾಗಿದೆ.

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕಃ 29.11.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಿಗಳರಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು ಚಾಸಾ-2 ರವರು ತಮ್ಮ ಜಮೀನಿನಲ್ಲಿ ಸೀಮೆ ಹುಲ್ಲನ್ನು ಕೂಯ್ಯುತ್ತಿದ್ದಾಗ, ಚಾಸಾ-1 ರವರ ಬಾಬ್ತು

ಜಮೀನಿನಲ್ಲಿದ್ದ ತೆಂಗಿನ ಮರದ ಗರಿಯು, 1 ಮತ್ತು 2 ನೇ ಆರೋಪಿತರುಗಳ ಜಮೀನಿಗೆ ಬಿದ್ದಿದ್ದು, 1 ನೇ ಆರೋಪಿಯು ತೆಂಗಿನ ಗರಿಯನ್ನು ಚಾಸಾ-1 ರವರ ಜಮೀನಿನ ಕಡೆಗೆ ಎಸೆದನು. ಆಗ ಚಾಸಾ-2 ರವರು ನಿಧಾನವಾಗಿ ಎಸೆಯಪ್ಪ ಚಿಕ್ಕಗಿಡಗಳ ಮೇಲೆ ಬಿದ್ದರೆ ಹಾಳಾಗುತ್ತದೆ ಎಂದು ಹೇಳಿದ್ದಕ್ಕೆ, 1 ನೇ ಆರೋಪಿಯು ಚಾಸಾ-2 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯವಾಗಿ ಬೈದು, ಇನ್ನೊಂದು ಸಾರಿ ನಿಮ್ಮ ಮರದ ಗರಿ, ನಮ್ಮ ಜಮೀನಿಗೆ ಬಿದ್ದರೆ, ನಿಮ್ಮನ್ನು ಸುಟ್ಟಾಕ್ತೀನಿ ಎಂದು ಚಾಸಾ-2 ರವರಿಗೆ ಪ್ರಾಣ ಬೆದರಿಕೆ ಹಾಕಿದನು. ಹಿಂದಿನ ದ್ವೇಷದಿಂದ 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಕುಡಗೋಲಿನಿಂದ ಚಾಸಾ-1 ರವರ ಬಲಗೈಗೆ ಹೊಡೆದು ರಕ್ತಗಾಯಪಡಿಸಿದ್ದು, ಆಗ ಚಾಸಾ-1 ರವರು ಕುಡಗೋಲನ್ನು ಹಿಡಿದುಕೊಂಡಾಗ, ಚಾಸಾ-1 ರವರ ಎಡಗೈ ಬೆರಳಿಗೆ ಕುಡುಗೋಲು ತಾಗಿ ರಕ್ತಗಾಯವಾಗಿರುತ್ತದೆ, ಚಾಸಾ-3 ರವರು ಜಗಳವನ್ನು ಬಿಡಿಸಲು ಬಂದಾಗ, 2 ನೇ ಆರೋಪಿಯು ಕೈಯಿಂದ ಚಾಸಾ-3 ರವರ ಮುಖದ ಮೇಲೆ, ಎದೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ. 1 ನೇ ಆರೋಪಿಯು ಇವರನ್ನೆಲ್ಲಾ ಕೊಲೆ ಮಾಡಿ, ಕೋರ್ಟ್ ನಲ್ಲಿ ಜಾಮೀನು ಪಡೆದುಕೊಳ್ಳುವುದಾಗಿ ಚಾಸಾ-1, ಚಾಸಾ-2 ಮತ್ತು ಚಾಸಾ-3 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರಿಗೆ

ಕುಡುಗೋಲಿನಿಂದ ಹೊಡೆದಿದ್ದರಿಂದ ಸಾಧಾರಣ ಸ್ವರೂಪದ ಏಟು ಬಿದ್ದಿರುತ್ತದೆ ಎಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**11.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ 3 ಜನ ಸಾಕ್ಷಿದಾರರನ್ನು ಪ್ರಾ.ಸಾ-1 ರಿಂದ ಪ್ರಾ.ಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು, ಅವರುಗಳಲ್ಲಿ ಪ್ರಾ.ಸಾ-1 ರವರು ಫಿರ್ಯಾದುದಾರರು, ಗಾಯಾಳು ಮತ್ತು ಪಂಚನಾಮೆ ಸಾಕ್ಷಿದಾರರಾಗಿರುತ್ತಾರೆ, ಪ್ರಾ.ಸಾ-2 ಮತ್ತು ಪ್ರಾ.ಸಾ-3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ ಹಾಗೂ ವಿಚಾರಣೆ ಮಾಡಿ 5 ದಾಖಲೆಗಳನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-5 ಎಂದು ಗುರುತಿಸಿರುತ್ತಾರೆ.

**12.** ಪ್ರಾ.ಸಾ-1 ಶ್ರೀನಿವಾಸಮೂರ್ತಿ ರವರು ಫಿರ್ಯಾದುದಾರರು, ಗಾಯಾಳು ಮತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಗೊತ್ತು, ಚಾಸಾ-2 ನನ್ನ ತಂದೆ, ಚಾಸಾ-3 ನನ್ನ ತಮ್ಮ, ಚಾಸಾ-4 ನನ್ನ ತಾಯಿ, ಚಾಸಾ-5 ರಿಂದ ಚಾಸಾ-10 ಗೊತ್ತು. ಆರೋಪಿಗಳು ನನಗೆ ಹೊಡೆದಿರುವುದಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ. ಪ್ರಾಣ ಬೆದರಿಕೆಯನ್ನು ಹಾಕಿರುವುದಿಲ್ಲ. ನಿಪಿ-1 ಮತ್ತು ನಿಪಿ-2ಕ್ಕೆ

ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**13.** ಪ್ರಾ.ಸಾ-2 ತಿಮ್ಮಪ್ಪ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಗೊತ್ತು, ಚಾಸಾ-1 ಮತ್ತು ಚಾಸಾ-3 ನನ್ನ ಮಗ, ಚಾಸಾ-4 ನನ್ನ ಹೆಂಡತಿ, ಚಾಸಾ-5 ರಿಂದ ಚಾಸಾ-10 ಗೊತ್ತು. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿತರು ನನಗೆ ಹೊಡೆದಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು

ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**14.** ಪ್ರಾ.ಸಾ-3 ಪ್ರಸಾದ್ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಗೊತ್ತು, ಚಾಸಾ-1 ನನ್ನ ಅಣ್ಣ, ಚಾಸಾ-2 ನನ್ನ ತಂದೆ, ಚಾಸಾ-4 ನನ್ನ ತಾಯಿ, ಚಾಸಾ-5 ರಿಂದ ಚಾಸಾ-10 ಗೊತ್ತು. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿತರು ನನಗೆ ಹೊಡೆದಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ.

ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**15.** ಈ ಸಾಕ್ಷಿದಾರರ ವಿಚಾರಣೆ ಆದ ನಂತರ ಮಾನ್ಯ ಸರ್ಕಾರಿ ಅಭಿಯೋಜಕರು ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸಲು ಕೋರಿಕೊಂಡಿರುತ್ತಾರೆ. ಆದರೆ ಈ ಪ್ರಕರಣದ ಫಿರ್ಯಾದುದಾರರು, ಗಾಯಾಳು, ಪಂಚನಾಮೆ ಸಾಕ್ಷಿದಾರರು ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ಸ್ವತಃ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೆ ಇದ್ದುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿತು. ನಂತರ ಆರೋಪಿತರ ವಿರುದ್ಧ ಯಾವುದೇ ವ್ಯತಿರಿಕ್ತ ಸಾಕ್ಷ್ಯ ಇಲ್ಲದಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313(1) (ಬಿ) ವಿಧಿಯನ್ವಯ ಆರೋಪಿತರಿಗೆ ವಿನಾಯಿತಿ ನೀಡಲಾಯಿತು. ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಗಳು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು

ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾ ಧಾರಗಳಿಂದ ರುಜುವಾತು ಆಗಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ತನ್ನೆಲ್ಲಾ ಸಂಶಯಾತೀತ ಕಾರಣಗಳಿಂದಾಗಿ ಆರೋಪಿತರ ಮೇಲಿನ ಅಪರಾಧವನ್ನು ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ **ಅಂಶ-1 ರಿಂದ 4 ಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**16. ಅಂಶ-5:** ಅಂಶ-1 ರಿಂದ 4 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿತರ ವಿರುದ್ದ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿತರು ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**:ಆದೇಶ:**

**ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.**

**ಆರೋಪಿತರ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.**

*(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **29ನೇ ಜೂನ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

ಸಹಿ/-
**(ವಿನಯ್ .ವಿ. ಕುಂದಾಪುರ್)**
**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**

ಸಿಸಿ ನಂ.**106/2021**

**::ಅನುಬಂಧ::**

**1. <u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:</u>**

| | | |
|---|---|---|
| ಪ್ರಾಸಾ-1 | : | ಶ್ರೀನಿವಾಸ್ ಮೂರ್ತಿ |
| ಪ್ರಾಸಾ-2 | : | ತಿಮ್ಮಪ್ಪ |
| ಪ್ರಾಸಾ-3 | : | ಪ್ರಸಾದ್ |

**2. <u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು:</u>**

| | | |
|---|---|---|
| ನಿಶಾನೆ ಪಿ-1 | : | ದೂರು |
| ನಿಶಾನೆ ಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಶಾನೆ ಪಿ-2 | : | ಮಹಜರ್ |
| ನಿಶಾನೆ ಪಿ-2(ಎ) | : | ಪ್ರಾಸಾ-1 ರವರ ಸಹಿ |
| ನಿಶಾನೆ ಪಿ-3 | : | ಪ್ರಾಸಾ-1 ರವರ ಹೇಳಿಕೆ |
| ನಿಶಾನೆ ಪಿ-4 | : | ಪ್ರಾಸಾ-2 ರವರ ಹೇಳಿಕೆ |
| ನಿಶಾನೆ ಪಿ-5 | : | ಪ್ರಾಸಾ-3 ರವರ ಹೇಳಿಕೆ |

**3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:**

**- ಇಲ್ಲಾ -**

**4. ಆರೋಪಿತರ ಪರ ಹಾಜರು ಪಡಿಸಿದ ದಾಖಲೆಗಳು:**

**- ಇಲ್ಲಾ -**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳು:**

**- ಇಲ್ಲಾ -**

ಸಹಿ/-

**(ವಿನಯ್.ವಿ. ಕುಂದಾಪುರ್)**

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಕನಕಪುರ.**

(ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರಕಟಿಸಲಾಗಿದೆ
ಪ್ರತ್ಯೇಕ ಆದೇಶದ ಹಾಳೆಯನ್ನು ವೀಕ್ಷಿಸಿ)

:ಆದೇಶ :

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆಯ ಕಲಂ 323, 324, 504 ಹಾಗೂ 506 ಸಹವಾಚಕ ಕಲಂ 34 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿತರ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

**2ನೇ ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಕನಕಪುರ.**